**ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾ.ದಂಃ ರವರ ನ್ಯಾಯಾಲಯ, ಮೂಡಿಗೆರೆ**
**ಸಿ.ಸಿ.821/2024**

| | | |
|---|---|---|
| ಸಾಕ್ಷಿದಾರರ ಹೆಸರು | : ಸುರೇಶ್ | ಫ್ರಾಸಾ-4 |
| ತಂದೆಯ ಹೆಸರು | : ಸಣ್ಣಯ್ಯ | ಚಾಸಾ-7 |
| ವಯಸ್ಸು | : 39 ವರ್ಷ | ಪ್ರಮಾಣ ವಚನ ಬೋಧಿಸಲಾದ |
| ಉದ್ಯೋಗ | : ಚಾಲಕ | ದಿನಾಂಕಃ 04.11.2025 |
| ವಾಸಸ್ಥಳ | : ಘಟ್ಟದಹಳ್ಳಿ | |

**:ಮುಖ್ಯ ವಿಚಾರಣೆ: ಫ್ರಾಜ್ಞ್ಯಾ.ಸ.ಸ.ಅ. ರವರಿಂದ:**

ನ್ಯಾಯಾಲಯದ ಮುಂದಿರುವ ಆರೋಪಿಯ ಪರಿಚಯ ನನಗಿಲ್ಲ. ಚಾಸಾ-1 ಮತ್ತು ಮೃತ ವಿಶ್ವೇಂದ್ರರವರ ಪರಿಚಯ ಸಹಾ ನನಗಿಲ್ಲ. ಚಾಸಾ-6 ರವರ ಪರಿಚಯ ನನಗಿದೆ. ಅವರು ನಮ್ಮ ಊರಿನವರು.

ಸಾಕ್ಷಿಯು ನಿಪಿ-5 ರ ಮಹಜರ್ ನಲ್ಲಿ ತಮ್ಮ ಸಹಿಯನ್ನು ಗುರುತಿಸಿ, ನಿಪಿ-6 ರ ಫೋಟೋದಲ್ಲಿ ತಾವು ಇರುವ ಬಗ್ಗೆ ಗುರುತಿಸುತ್ತಾರೆ. ಮಹಜರ್ ನಲ್ಲಿನ ಸಾಕ್ಷಿಯ ಸಹಿಯನ್ನು ನಿಪಿ-5(ಬಿ) ಎಂದು ಗುರುತಿಸಲಾಯಿತು.

1 ವರ್ಷದ ಹಿಂದೆ ನಾನು ಮತ್ತು ಚಾಸಾ-6 ರವರು ನನ್ನ ಕೆಲಸದ ನಿಮಿತ್ತ ಮೂಡಿಗೆರೆ ಪೋಲಿಸ್ ಠಾಣೆಗೆ ಹೋಗಿದ್ದಾಗ ಪೋಲಿಸರು ನನ್ನನ್ನು ಬಿದರಹಳ್ಳಿಯ KSRTC ಡಿಪೋ ಬಳಿ ಕರೆದುಕೊಂಡು ಹೋಗಿ ನನ್ನ ಪೋಟೋ ಮತ್ತು ಸಹಿಗಳನ್ನು ಪಡೆದಿರುತ್ತಾರೆ. ಅಪಘಾತದ ವಿಚಾರ ಎಂದು ಹೇಳಿ ನನ್ನ ಸಹಿಯನ್ನು ಪಡೆದಿದ್ದು, ಅಪಘಾತವು ಯಾವ ದಿನಾಂಕ ಹಾಗೂ ಯಾವ ವಾಹನಗಳ ನಡುವೆ ಆಗಿತ್ತು ಎಂದು ನನಗೆ ಗೊತ್ತಿಲ್ಲ. ನಿಪಿ-5 ರಲ್ಲಿ ಏನು ಬರೆದಿದೆ ಎಂದು ನನಗೆ ಗೊತ್ತಿಲ್ಲ.

(ಈ ಹಂತದಲ್ಲಿ ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಫ್ರಾಜ್ಞ್ಯಾ ಸ.ಅ.ಅ. ರವರು ಪಾಟೀ ಸವಾಲು ಮಾಡಲು ಅನುಮತಿ ಕೋರಿದ್ದು ಅನುಮತಿ ನೀಡಿದೆ)

**ಪಾಟೀ ಸವಾಲು: ಫ್ರಾಜ್ಞ್ಯಾ.ಸ.ಸ.ಅ. ರವರಿಂದ:**

ಸಾಕ್ಷಿಗೆ ನಿಪಿ-5 ರ ಸಂಪೂರ್ಣ ವಿಚಾರವನ್ನು ಓದಿ ಹೇಳಿದ್ದು ಸಾಕ್ಷಿಯು ಅವುಗಳನ್ನು ಅಲ್ಲಗಳೆಯುತ್ತಾರೆ.

ನನಗೆ ಪ್ರಕರಣದ ಬಗ್ಗೆ ಸಂಪೂರ್ಣ ಮಾಹಿತಿ ತಿಳಿದಿದ್ದರೂ ಸಹಾ ಆರೋಪಿಗೆ ಸಹಾಯ ಮಾಡುವ ಉದ್ದೇಶದಿಂದ ಸುಳ್ಳು ಸಾಕ್ಷ್ಯನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಪಾಟೀ ಸವಾಲು: ಆರೋಪಿ ಪರ ವಕೀಲರು ಇಲ್ಲ ಎಂದು ತಿಳಿಸಿರುತ್ತಾರೆ.**

**<u>ಮರು ವಿಚಾರಣೆ ಇಲ್ಲ</u>**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿ ಮುದ್ರಿಸಲಾಯಿತು)

ಓ ಹೇ ಕೇ ಸ ಇ ಎ ಒ.,

ಸಹಿ/-

ಸಾಕ್ಷಿ ಸಹಿಃ

ಪ್ರಧಾನ ಸಿವಿಲ್ ನ್ಯಾಯಾಧೀಶರು
ಮತ್ತು ಪ್ರದನ್ಯಾದಂ., ಮೂಡಿಗೆರೆ.